# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 898 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 23.02.2023 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | CL-7, CL-9 ಲೈಸೆನ್ಸ್‌ಗಳನ್ನು ಪಡೆದು Bar and Restaurant ಮತ್ತು Wine Storeಗಳ ಮೂಲಕ ಖರೀದಿಸಿ ಹಳ್ಳಿಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅಧಿಕೃತ ಮದ್ಯದ ಅಂಗಡಿಗಳಿಂದ ಮದ್ಯವನ್ನು ಖರೀದಿಸಿ, ಗ್ರಾಮಾಂತರ ಪ್ರದೇಶದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ | ಸರ್ಕಾರದ MSIL ಮದ್ಯದಂಗಡಿಗಳ ಮೂಲಕ ವಾರ್ಷಿಕ ನಡೆಯುತ್ತಿರುವ ಒಟ್ಟು ಮದ್ಯ ವಹಿವಾಟು ಎಷ್ಟು ಮತ್ತು ಮದ್ಯ ವ್ಯಾಪಾರದ ಅಕ್ರಮದ ಅಡಿಯಲ್ಲಿ ಒಟ್ಟು ಎಷ್ಟು ಕೇಸ್‌ಗಳನ್ನು ಹಾಕಿ ದಂಡ ವಸೂಲಿ ಮಾಡಲಾಗಿದೆ; | ಕಳೆದ ಮೂರು ವರ್ಷಗಳಲ್ಲಿ MSIL ಮದ್ಯದಂಗಡಿಗಳ ಮೂಲಕ ನಡೆಸಿದ ವಾರ್ಷಿಕ ಮದ್ಯ ಮಾರಾಟ ವಹಿವಾಟು ವಿವರ ಕೆಳಕಂಡಂತಿದೆ. |

| ವರ್ಷ (ಏಪ್ರಿಲ್ ರಿಂದ ಮಾರ್ಚ್ ವರೆಗೆ) | ಮಾರಾಟವಾದ ಮದ್ಯ (ಐಎಂಎಲ್, ವೈನ್ ಮತ್ತು ಬಿಯರ್ ಸೇರಿದಂತೆ) (ಲಕ್ಷ ಪೆಟ್ಟಿಗೆಗಳಲ್ಲಿ) | ಮದ್ಯದ ವಹಿವಾಟು ಮೌಲ್ಯ (ರೂ. ಕೋಟಿಗಳಲ್ಲಿ) |
|---|---|---|
| 2019–20 | 57.33 | 1,744.40 |
| 2020–21 | 63.22 | 2,211.42 |
| 2021–22 | 63.81 | 2,213.32 |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/02/2023 02:54 PM

| | | |
|---|---|---|
| | | ಕಳೆದ ಮೂರು ವರ್ಷಗಳಲ್ಲಿ ಸನ್ನದು ಷರತ್ತು ಉಲ್ಲಂಘನೆಗಾಗಿ ಮದ್ಯ ಮಾರಾಟ ಸನ್ನದುಗಳ ವಿರುದ್ಧ ದಾಖಲಿಸಿದ ಪ್ರಕರಣಗಳು ಹಾಗೂ ವಸೂಲಿಸಿದ ದಂಡದ ವಿವರ ಕೆಳಕಂಡಂತಿದೆ. |

| ಅಬಕಾರಿ ಸಾಲು (ಜುಲೈ ರಿಂದ ಜೂನ್ ಮಾಹೆವರೆಗೆ) | ದಾಖಲಿಸಿದ ಬಿ.ಎಲ್.ಸಿ ಪ್ರಕರಣಗಳು | ವಸೂಲಿಸಿದ ದಂಡದ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|
| 2020–21 | 10,969 | 14.14 |
| 2021–22 | 13,615 | 24.33 |
| 2022–23 (ಡಿಸೆಂಬರ್ ಅಂತ್ಯದವರೆಗೆ) | 7,675 | 4.02 |

| | | |
|---|---|---|
| ಇ | ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆ ಮತ್ತು ಮಕ್ಕಳು ಹೆಚ್ಚಾಗಿ ಓಡಾಡುವಂತಹ ಪ್ರದೇಶಗಳಲ್ಲಿ ಮದ್ಯ ಮಾರಾಟ ಪ್ರಾರಂಭಿಸಿದ ಹಿನ್ನಲೆಯಲ್ಲಿ ಮಹಿಳೆಯರಿಂದ ಅನೇಕ ಪ್ರತಿಭಟನೆಗಳು ನಡೆದಿದ್ದರು ಅಂತಹ ಮದ್ಯ ಮಾರಾಟ ಮಳಿಗೆಗಳನ್ನು ಸ್ಥಳಾಂತರಿಸದಿರಲು ಕಾರಣವೇನು? | ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರನ್ವಯ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು), ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ / ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ.<br>ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ.38298/1995 'ಶ್ರೀ.ಎಸ್.ನಾಗಭೂಷಣ Vs ಕರ್ನಾಟಕ ರಾಜ್ಯ' ಪ್ರಕರಣದಲ್ಲಿ ಹಾಗೂ W.A No : 2909 of 2018 (ಅಬಕಾರಿ) 'ವಿನೋಬನಗರ ನಾಗರಿಕಾ ಹಿತರಕ್ಷಣಾ ಸಮಿತಿ, ಇತರರು ಮತ್ತು ಕರ್ನಾಟಕ ರಾಜ್ಯ' ಪ್ರಕರಣದಲ್ಲಿ ಕೇವಲ ಸಾರ್ವಜನಿಕರು |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/02/2023 02:54 PM

| | | |
|---|---|---|
| | | ಆಕ್ಷೇಪಿಸಿದ್ದಾರೆ ಎಂಬ ಮಾತ್ರಕ್ಕೆ ಸನ್ನದು ಸ್ಥಳಾಂತರದ ಆದೇಶವನ್ನು ಹೊರಡಿಸಲು ಸಾರ್ವಜನಿಕರ ಆಕ್ಷೇಪಣೆಗಳು ಸಕಾರಣವಾಗುವುದಿಲ್ಲ ಎಂದು ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರಡಿಯಲ್ಲಿ ನಿಗಧಿಪಡಿಸಿರುವ ಕಾರಣಗಳಿಗಾಗಿ ಮಾತ್ರ ಸನ್ನದುಗಳಿಗೆ ನೀಡಲಾಗುವ ಅನುಮತಿಯನ್ನು ನಿರಾಕರಿಸಬಹುದಾಗಿರುತ್ತದೆ ಹೊರತಾಗಿ ಬೇರೆ ಯಾವುದೇ ಕಾರಣಕ್ಕೂ ಸನ್ನದುಗಳಿಗೆ ನೀಡಲಾಗುವ ಅನುಮತಿಯನ್ನು ನಿರಾಕರಿಸಲು ಬರುವುದಿಲ್ಲ ಎಂದು ತೀರ್ಪನ್ನು ನೀಡಿರುತ್ತದೆ.<br><br>ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಉಲ್ಲಂಘನೆಯಾದರೆ ಹಾಗೂ ಸನ್ನದುಗಳ ಕಾರ್ಯನಿರ್ವಹಣೆ ಇಂದ ಸಾರ್ವಜನಿಕರ ಅನುಕೂಲತೆ, ನೈತಿಕತೆ, ಶಾಂತಿ, ನೆಮ್ಮದಿ, ಸಭ್ಯತೆ ಅಥವಾ ಸುರಕ್ಷತೆಗೆ ಧಕ್ಕೆ ಉಂಟಾಗುವ ಸಂಭವವಿರುತ್ತದೆ ಅಥವಾ ಧಕ್ಕೆ ಉಂಟಾಗಿರುತ್ತದೆ ಎಂದು ದೃಢಪಟ್ಟಲ್ಲಿ ಹಾಗೂ ತತ್ಸಂಬಂಧ ಜಿಲ್ಲಾ ಪೊಲೀಸ್ ಅಧೀಕ್ಷಕರು, ಜಿಲ್ಲಾಧಿಕಾರಿಗಳು ಸನ್ನದು ಸ್ಥಳಾಂತರಕ್ಕೆ ಪ್ರತಿಕೂಲ ವರದಿಗಳನ್ನು ಸಲ್ಲಿಸಿದ್ದಲ್ಲಿ, ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5(1), ನಿಯಮ 5(2-A) ಮತ್ತು 5(4)(a)ರಂತೆ ಸನ್ನದುದಾರರಿಗೆ ಮೂರು ತಿಂಗಳ ಕಾಲಾವಕಾಶವನ್ನು ನೀಡಿ ಸನ್ನದನ್ನು ಬೇರೆ ಆಕ್ಷೇಪಣಾ ರಹಿತ ಸ್ಥಳಕ್ಕೆ ಸ್ಥಳಾಂತರಿಸಿಕೊಳ್ಳುವಂತೆ ಸಂಬಂಧಪಟ್ಟ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರು ಸ್ಥಳಾಂತರ ಆದೇಶವನ್ನು ಹೊರಡಿಸುತ್ತಾರೆ. |

ಆಇ 16 ಇಎಲ್‌ಕ್ಯೂ 2023

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 22/02/2023 02:54 PM